ಎಂದು ಪ್ರಮೋದ್ ಶಾಸ್ತ್ರಿ ತಣ್ಣಗೆ ಹೇಳಿದ್ದ. ಈ ಮಾತುಗಳನ್ನು ಕೇಳಲಾಗದೆ ಜಿ.ವಿ. ಹೆಗಡೆ ಕಿವಿ, ಕಣ್ಣು ಎರಡನ್ನೂ ಮುಚ್ಚಿಕೊಂಡಿದ್ದ. ಅಂತೂ ಅಂದು ರಾತ್ರಿ ಕಳೆದು ಬೆಳಗಾಗಿತ್ತು. ಬೆಳಿಗ್ಗೆ ಏಳು ಗಂಟೆಗೆ ಕಾಫಿ ತರಿಸಿಕೊಟ್ಟದ್ದರು. ಮನಸ್ಸು ಒಂದಿಷ್ಟು ಉಲ್ಲಾಸಗೊಂಡಿತ್ತು. ಎಂಟೂವರೆಗೆ ಡಿಸಿಪಿ ಸಾಹೇಬರು ಬಂದಿದ್ದರು. ಸೆಲ್ ನಿಂದ ಮೊದಲು ನನ್ನನ್ನು ಕರೆತಂದು ಅವರ ಮುಂದೆ ನಿಲ್ಲಿಸಿದ್ದರು. 'ವಿಚಾರಣೆಯಲ್ಲಿ ನಿನ್ನದೇನೂ ಅಂಥ ತಪ್ಪಿಲ್ಲವೆಂದು ತಿಳೀತು. ಆದರೂ ನೀನು ರೂಮ್‌ಮೇಟ್ ಹೆಗಡೆಯ ಪ್ರಭಾವಕ್ಕೆ ಒಳಗಾಗಿದ್ದೀಯ. ನಿನ್ನನ್ನು ಬಿಟ್ಟು ಬಿಡ್ತೀನಿ. ಆದರೆ, ನೀನು ಇನ್ನೊಂದು ವಾರ ಯೂನಿವರ್ಸಿಟಿ ಕ್ಲಾಸ್ ಮತ್ತು ಹಾಸ್ಟೆಲಿಗೆ ಕಾಲಿಡದೆ ಊರಿನ ಬಸ್ಸು ಹತ್ತಬೇಕು' ಎಂದ ಡಿಸಿಪಿಯವರ ಮಾತಿನಲ್ಲಿ ಗಡಸುತನ ತುಂಬಿತ್ತು. ನಾನು ಸ್ಟೇಷನ್ನಿನಿಂದ ಹೊರಬಂದವನೇ ಬಸ್ ಸ್ಟ್ಯಾಂಡ್ ಕಡೆ ನಡೆದು ಊರಿನ ಬಸ್ ಹತ್ತಿದ್ದೆ. ಹತ್ತು ದಿನ ಕಳೆದ ನಂತರ ಯೂನಿವರ್ಸಿಟಿಗೆ ಹಿಂತಿರುಗಿದ್ದೆ. ವಾತಾವರಣ ತಿಳಿಯಾಗಿತ್ತು. ಪರುಶುರಾಮ ಗೌಡ ಸಿಕ್ಕಿದ್ದ. ನನ್ನನ್ನು ಬಿಟ್ಟ ದಿನ ಮಧ್ಯಾಹ್ನ ಅವನನ್ನೂ ಸ್ಟೇಷನ್ನಿನಿಂದ ಬಿಟ್ಟು ಬಿಟ್ಟದ್ದರಂತೆ. ಹೊರಟು ಬರುವಾಗ ಡಿಸಿಪಿ ಲಾಟಿಯಿಂದ ಪಿರ್ರೆಯ ಮೇಲೆ ಎರಡು ಬಿಟ್ಟದ್ದರಂತೆ. ಆದರೆ, ಹೆಗಡೆ ಮತ್ತು ಪ್ರಮೋದ್ ಶಾಸ್ತ್ರೀನ ಮತ್ತೆರಡು ದಿನಗಳ ಕಾಲ ಸ್ಟೇಶನ್ನಿನಲ್ಲೇ ಇರಿಸಿಕೊಂಡು ಚಿತ್ರಹಿಂಸೆ ಕೊಟ್ಟದ್ದರಂತೆ. ವಿಷಯ ತಿಳಿದು ಜಿ.ವಿ. ಹೆಗಡೆಯ ಅಪ್ಪ ಮಂಗಳೂರಿನಿಂದಲೇ ಲಾಯರ್ ಒಬ್ಬರನ್ನು ಕರೆದುಕೊಂಡು ಬಂದು ಮಗನನ್ನು ಬಿಡಿಸಿಕೊಂಡು ಹೋದರಂತೆ. ಅಂದೇ ಪ್ರಮೋದ್ ಶಾಸ್ತ್ರಿಯನ್ನೂ ಬಿಡುಗಡೆ ಮಾಡಿದ್ದರಂತೆ. ಪ್ರಮೋದ್ ಶಾಸ್ತ್ರಿ ನಾಲ್ಕು ದಿನಗಳ ಕಾಲ ಆಸ್ಪತ್ರೆಯಲ್ಲಿ ಇದ್ದು ಬಂದು ವಾರ ಕಾಲ ಹಾಸ್ಟೆಲ್ ರೂಮಿನಿಂದ ಹೊರಗೆ ಬಂದಿರಲಿಲ್ಲವಂತೆ. ಬೆನ್ನು ಮತ್ತು ಪಿರ್ರೆಗಳ ಮೇಲೆ ಸಣ್ಣ ಸಣ್ಣ ಬಾಸುಂಡೆಗಳು ಎದ್ದಿದ್ದವಂತೆ. ಅವುಗಳನ್ನು 'ಪ್ರಜಾಪ್ರಭುತ್ವದ ಲಡ್ಡುಗಳು' ಎಂದು ಎಲ್ಲರಿಗೂ ತೋರಿಸುತ್ತಾ ಹುಚ್ಚುಚ್ಚಾಗಿ ಮಾತನಾಡುತ್ತಿದ್ದನಂತೆ.

ಆಟೋ ಡ್ರೈವರ್ 'ಜಿ.ವಿ. ಹೆಗಡೆಯವರ ಮನೆ ಬಂತು ಸರ್' ಎಂದಾಗ ನೆನಪುಗಳಿಂದ ಕಳಚಿಕೊಂಡು ವಾಸ್ತವಕ್ಕೆ ಬಂದಿದ್ದೆ. ಆಟೋ ಅಡಿಕೆ ತೋಟದ ದೊಡ್ಡ ಹೆಂಚಿನ ಮನೆಯ ಗೇಟಿನ ಮುಂದೆ ನಿಂತಿತ್ತು. ನಾನು ಬ್ಯಾಗಿನೊಂದಿಗೆ ಆಟೋ ಇಳಿದಾಗ ಮಳೆ ಬಿಡುವು ಕೊಟ್ಟಿತ್ತು. ಆಟೋದವನಿಗೆ ಮುನ್ನೂರು ರೂಪಾಯಿ ಕೊಟ್ಟಾಗ 'ಸರ್, ಜಿ.ವಿ. ಹೆಗಡೆಯವರಿಗೆ ಮಾತ್ರ ಮುನ್ನೂರು ರೂಪಾಯಿ ಕೊಟ್ಟದ್ದಾಗಿ ಹೇಳಬೇಡಿ. ಇನ್ನೂರು ಕೊಟ್ಟೆನೆಂದು ಹೇಳಿ. ಗೊತ್ತಾದರೆ ಹೆಗಡೆಯವರು ನನ್ನ ಗ್ರಹಚಾರ ಬಿಡಿಸ್ತಾರೆ' ಎಂದು ನಗುತ್ತಾ ಆಟೋ ಚಾಲು ಮಾಡಿಕೊಂಡು ಹೊರಟು ಹೋಗಿದ್ದ. ಗೇಟಿಗೆ ಜಿ.ವಿ. ಹೆಗಡೆಯ ಮಗ ನಾರಾಯಣ ಹೆಗಡೆ ಬಂದು ನನ್ನ ಲಗೇಜ್ ಇಸಿದುಕೊಂಡಿದ್ದರು. ಮನೆ ತುಂಬಾ ದೊಡ್ಡದಾಗಿದ್ದು ಸುತ್ತಲೂ ವಿಸ್ತಾರವಾದ ಹೆಂಚಿನ ಹಜಾರ ಚಾಚಿಕೊಂಡಿತ್ತು. ಅಲ್ಲಲ್ಲಿ ಹಸಿ ಅಡಿಕೆ, ಸುಲಿದ ಅಡಿಕೆ, ಒಣಗಿದ ಅಡಿಕೆ ಚೀಲಗಳು ಹರಡಿಕೊಂಡಿದ್ದವು. ನಾರಾಯಣ ಹೆಗಡೆ ಥೇಟ್ ಜಿ.ವಿ. ಹೆಗಡೆಯ ಪಡಿಯಚ್ಚಿನಂತೆ ಕಂಡಿದ್ದ. 'ಪ್ರಯಾಣ ಆರಾಮಿತ್ತ, ನೀವು ಮುಂದಿನ ವಾರ ಬರ್ತೀನಿ ಎಂದು ಹೇಳಿದ ನೆನಪು. ಒಂದು ಫೋನ್ ಮಾಡಿದ್ದರೆ ಕುಮಟಾಕ್ಕೆ ಕಾರಿನಲ್ಲಿ ಬಂದು ಪಿಕ್ ಮಾಡುತ್ತಿದ್ದೆ' ಎಂದಿದ್ದ. 'ಯಾಕೋ ಜಿ.ವಿ.ಯನ್ನು ನೋಡುವ ಆಸೆ ಇಮ್ಮಡಿಯಾಗಿ ಹೀಗೆ ಬಂದುಬಿಟ್ಟೆ, ಏಕೆ ಏನಾದರೂ ಅನನುಕೂಲವಾ?' ಕೇಳಿದ್ದೆ. 'ಅರೆ ಎಂಥಾ ಅನನುಕೂಲ. ಬಹಳ ದಿನಗಳಿಂದ ಅಪ್ಪ ನಿಮ್ಮನ್ನು ಕನವರಿಸುತ್ತಿದ್ದಾರೆ. ನಿಮ್ಮ ಬಗ್ಗೆ ಮೊದಲಿನಿಂದಲೂ ಆಗಾಗ್ಗೆ ಹೇಳುತ್ತಲೇ ಇದ್ದರು. ನೀವು ಬಂದದ್ದು ನಿಜಕ್ಕೂ ಸಂಭ್ರಮ ಮೂಡಿಸಿದೆ. ಎರಡು ವರ್ಷಗಳ ಹಿಂದೆ ನರದೌರ್ಬಲ್ಯದಿಂದಾಗಿ ಎಡಗೈ, ಎಡಗಾಲು ಸ್ವಾಧೀನ ಕಳೆದುಕೊಂಡಿದ್ದವು. ಯಲ್ಲಾಪುರದ ಡಾಕ್ಟರ್ ಲಕ್ಷ್ಮಣ ಭಟ್ಟರ ನಾಟಿ ವೈದ್ಯದ ಜೊತೆಗೆ ಫಿಸಿಯೋಥೆರಪಿಯಿಂದಾಗಿ ಮೂರು ತಿಂಗಳಿಂದ ನಡೆದಾಡತೊಡಗಿದ್ದಾರೆ. ಅಡಿಕೆ ತೋಟದಲ್ಲಿ ಸ್ವಲ್ಪ ಸ್ವಲ್ಪವಾಗಿ ಓಡಾಡಿಕೊಂಡಿದ್ದಾರೆ. ಹೊರಗಡೆ ಓಡಾಡಲು ಇನ್ನೂ ಐದಾರು ತಿಂಗಳು ಹಿಡಿಸುತ್ತೆ ಎಂದು ಡಾಕ್ಟರ್ ಹೇಳಿದ್ದಾರೆ' ಎಂದು ಹೇಳುತ್ತಾ ವಿಶಾಲವಾದ ನಡುಮನೆಗೆ ಕರೆದುಕೊಂಡು ಹೋಗಿದ್ದ. ಮೆತ್ತನೆಯ ಸೋಫಾದ ಮೇಲೆ ಟೀವಿ ನೋಡುತ್ತಾ ಕುಳಿತಿದ್ದ ಜಿ.ವಿ. ಹೆಗಡೆ ನನ್ನನ್ನು ನೋಡಿ ಖುಷಿಯಿಂದ ಎದ್ದು ನಿಂತು 'ಅರೆ ಭೂಮಿ ಗುಂಡಾಗಿದೆ ಅನ್ನುವುದಕ್ಕೆ ಈ ಕ್ಷಣವೇ